ಸುತ್ತಲೂರಿನ ಜಾತ್ರೆ, ಉರುಸು, ಸಂತೆ ಅಂತ ಏನನ್ನೊ ಯಾರನ್ನೊ ಹುಡುಕಿಕೊಂಡು ಅಲೆಯುತ್ತಿದ್ದ. ಸ್ವಲ್ಪ ದಿನ ನಾಟಕದ ಹುಚ್ಚು ತಲೆಗೇರಿತ್ತು. ''ನಾನು ನಾಟ್ಕದಾಗ ಹೆಣ್ಣ್ ಪಾರ್ಟ ಮಾಡ್ತೀನಿ'' ಅಂತ ಸೋಗು ಹಾಕಿದ, ಅಲ್ಲೂ ಗಿಂಟಲಿಲ್ಲ.

ಈ ಮಧ್ಯೆ ವಾದಿಯೂ ಪಟ್ಟಣದ ಹಾಸ್ಟೆಲ್ ಸೇರಿದ್ದ. ಆದರೆ, ಆಗಾಗ ಊರಿಗೆ ಬಂದಾಗ ಗೆಳೆಯರೊಂದಿಗೆ ಊರ ಮುಂದಿನ ಹೊಲಗಳಲ್ಲಿ ಕ್ರಿಕೆಟ್ ಆಡುವಾಗ ರಾಘ್ಯಾನ ಕುರಿತು ಮಾತುಗಳು ಬಂದು ಏನೇನೊ ಅಸಹ್ಯದ ಮಾತಾಡಿ ಹುಡುಗರೆಲ್ಲ ಕೊಕಾಸಿ ನಗುತ್ತಿದ್ದರು. ಆವಾಗೆಲ್ಲ ಅವರು ವಾದಿಯ ಕಡೆ ವಿಚಿತ್ರವಾಗಿ ನೋಡುತ್ತಿದ್ದರು! ಏನೊಂದೂ ಅರ್ಥವಾಗದೆ ವಾದಿ ಕಂಗಾಲಾಗುತ್ತಿದ್ದ.

ವಾದಿಯ ಅಕ್ಕ ತ್ರಿವೇಣಿಗೆ ರಾಘುವನ್ನು ಕಂಡರೆ ತುಂಬಾ ಪ್ರೀತಿ! ಮಾತು ಬಂದಾಗಲೆಲ್ಲ ತುಂಬಾ ಹೊಗಳುತ್ತಿದ್ದಳು. ರಾಘು ಆಕೆಗೆ ಗೆಳತಿಯಂತೆಯೇ ಹೊಂದಿಕೊಂಡಿದ್ದ. ತಲೆಯ ಮೇಲೆ ಪುಟ್ಟಿಯಲ್ಲಿ ಬಟ್ಟೆ ವಟ್ಟಿಕೊಂಡು ಊರ ಮುಂದಿನ ಹಳ್ಳಕ್ಕೆ ಹೋದರೆ, ''ಏನವ್ವ ಯಕ್ಕ ಜಲ್ದಿ ಬಂದೆಲಾ ಹಳ್ಳಕಾ? ಏಸು ಬಟ್ಯಾ ಯವ್ವ ಕೊಡು'' ಅಂತೇಳಿ ತಾನು ಒಂದಿಷ್ಟು ಒಗೆದು ಕೊಡುತ್ತಿದ್ದ. ಅವನ ಕೈಯೊಳಗೆ ಸವಾಲ್ ಎಂಬ ಬಿಳಿಸಾಬೂನು ಎಷ್ಟು ನಾಜೂಕಾಗಿ ಬಟ್ಟೆಗಳ ಮೇಲೆ ಆಡುತ್ತಿತ್ತು ಎಂದರೆ ನೇತ್ರಾ ನೋಡಿಯೇ ಬೆರಗಾಗುತ್ತಿದ್ದಳು!

''ರಾಘಣ್ಣ ನೆದರಿಗೆ ಸಿಡೆಂಗ ಒಗಿತಿದ್ದಿ ನೋಡು ಬಟ್ಟೀ, ಹಿಂದಿನ ಜನಮ್ದಾಗ ಏನಾಗಿದ್ದೇನು?'' ಅಂತಿದ್ದಳು.

''ಹಿಂದ ಏನರ ಆಗಿರಲಿ ಯಕ್ಕ, ಮುಂದೀನ ಜನಮ್ದಾಗ ನಿನ್ನಂತಾಕಿ ಹೊಟ್ಯಾಗ ಮಗಳಾಗಿ ಹುಟ್ಲೆವ ನಾನು'' ಅಂತ ಬಾಯ್ತುಂಬ ನಗುತ್ತಿದ್ದ. ಪರೀಕ್ಷಿಸಿದರೆ ಕಣ್ಣ ಕೊನೆಯಲ್ಲಿ ಕಣ್ಣೀರು ಮಡುಗಟ್ಟಿರುತ್ತಿತ್ತೇನೊ!? ಆದರೆ, ಇಣುಕಿ ನೋಡುವಷ್ಟು ಪುರುಸೊತ್ತಾದರೂ ಯಾರಿಗಿತ್ತು.

ಬಟ್ಟೆ ಒಗಿಯೋದು ಮುಗಿದ ಕೂಡಲೇ, ''ಯಕ್ಕ, ಹಂಗೇ ಕಾಲು ಕೊಡು, ಏಟು ಮಣ್ಣು ಕುಂತಾದ ಜಳಜಳ ತಿಕ್ಕಮು'' ಅಂತಿದ್ದ.

ರಾಘುವನ್ನ ಮುಟ್ಟಿಸಿಗೆಳದು, ತಟ್ಟಿಸಿಗೆಳದು ಹೊಸದು ಅನಿಸಿದ್ದಿಲ್ಲ ಊರಾಗಿನ ಹೆಣ್ಮಕ್ಕಿಗೆ.

ಮೈ ತೊಕ್ಕಳೋ ಬಚ್ಚಲ ಮುಂದ ಕುಂತು, ಊರು ಸುದ್ದಿ ಹೇಳೋಟು ಸದರ ಸಿಕ್ಕು ಬಾಳ ದಿನಗಳೇ ಆಗಿದ್ದವು. ಕಾಲು ಇಳಿ ಬಿಟ್ಟು ಕೊಟ್ಟರೆ ಕೈಗೆ ಸಿಕ್ಕ ಪಾದಗಳನ್ನ ನೀರಿಗದ್ದಿ ಎಷ್ಟು ಕಕ್ಕುಲಾತಿಯಿಂದ ಕಾಲು ತಿಕ್ಕುತ್ತಿದ್ದನೆಂದರೆ ಕಾಲಮೇಲೆ ನವಿಲುಗರಿ ಆಡಿದಂಗ್ಯಾಗುತ್ತಿತ್ತು.

ಹಳ್ಳದ ದಂಡಿಯಲಿ ಬಿದ್ದಿರುತ್ತಿದ್ದ ಸಾಪನ ಕಲ್ಲು ತೆಗೆದುಕೊಂಡು ಪಾದ, ಬೆರಳು ಸಂದಿ, ಹಿಮ್ಮೊಡ ತಿಕ್ಕಿ ಹೊಳಪು ಮಾಡುತ್ತಿದ್ದ. ''ಬಾರಿನ ಚಪ್ಲಿ ಹಾಕ್ಯ ಬ್ಯಾಡಂಗೆ ಯಕ್ಕ ಹೆಂಗ ಹೆಜ್ಜಿ ಬಿದ್ದಾವ ನೋಡು'' ಅಂತ ಉದ್ದಕ್ಕೆ ಬೆಳ್ಳಗೆ ಬಾರು ಮೂಡಿದ್ದನ್ನ ತೋರಿಸುತ್ತಿದ್ದ.

ವಾದಿಗೆ ರಾಘುವನ್ನ ಕಂಡರೆ ಕೋಪ ದ್ವೇಷಗಳಾಗಲಿ, ಅಂತಹ ಕುತೂಹಲಗಳಾಗಲಿ ಇರಲಿಲ್ಲ. ಆದರೆ, ಒಂದು ಸಲ ಅಪ್ಪನೊಂದಿಗೆ ನಿಂತು ಮಾತಾಡುವದನ್ನ ನೋಡಿದ ಮೇಲೆ ಮಾತ್ರ ಮೊದಲಿನಂತೆ ಇರಲಾಗಲಿಲ್ಲ!

ಆಮೇಲೆ ರಾಘು ಎಲ್ಲಿ ಕಂಡರೂ ಅಸಹ್ಯ ಎನಿಸಿ ಕೋಪ ಉಕ್ಕಿ ಬರುತ್ತಿತ್ತು. ಆ ದಿನ ಕಣ್ಣಿಗೆ ಬಿದ್ದಾಗ ರಾಘು ಮತ್ತು ಅಪ್ಪ ಈ ಜಗತ್ತಿಗೆ ಸಂಬಂಧವೇ ಇಲ್ಲದಂತೆ ಮಾತಿಗೆ ತೊಡಗಿದ್ದರು. ಅನ್ಯಗ್ರಹ ಜೀವಿಗಳು ಅಪರೂಪಕ್ಕೆ ಸೇರಿದಂತಿತ್ತು. ಹಬ್ಬಕ್ಕೆ ಬಂದ ಅಕ್ಕತಂಗಿಯರು ಆಪ್ಯಾಯಮಾನವಾಗಿ ಮಾತಿಗೆ ಕುಳಿತವರಂತೆ ಕಿಲಕಿಲ ನಗುತ್ತಿದ್ದರು.

ರಾಘುವಿನ ಕೈಯ ಬಳೆಯಂತಹ ಕಡಗವನ್ನ ನಿಧಾನಕ್ಕೆ ಬಿಚ್ಚುತ್ತಿದ್ದ, ಅಪ್ಪ ನಾಚಿಕೊಳ್ಳುತ್ತ ತನ್ನ ಮಣಿಕಟ್ಟು ದಾಟಿ ಮುಂಗೈಗೆ ಏರಿಸಿಕೊಳ್ಳುತ್ತಿದ್ದ! ರಾಘುವಿನ ಮುಖದಲ್ಲಿ ಸದಾ ಕಾಣಿಸುತ್ತಿದ್ದ